## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

ಸಿಸಿ ನಂ ಃ 205/2021
ಸಿಡಬ್ಲ್ಯು ಃ 11
ಪಿಡಬ್ಲ್ಯು ಃ 4

**ಹೆಸರು** ಃ ಅಂಬಣ್ಣಾ ಚಿದಂಬರ ಬೋಪೆನವರ
**ವಯಾ** ಃ 64 ವರ್ಷ
**ಉದ್ಯೋಗ** ಃ ನಿವೃತ ಎಎಸ್ಐ
**ವಾಸ** ಃ ಗೋಕಾಕ

**(ದಿನಾಂಕಃ 03-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ ಸಸಅಃರವರಿಂದಃ**

ನಾನು 2009 ರಿಂದ 2014ರವರಗೆ ಅಬಕಾರಿ ಮತ್ತು ಲಾಟರಿ ನಿಷ್ಪೇಧ ದಳದ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15-05-2013 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 4-45 ಕ್ಕೆ ಚಾಸಾ-1 ಇವರು ಗಣಕ ಯಂತ್ರದಲ್ಲಿ ತಯಾರಿಸಿದ ವೃತ್ತ ಫಿರ್ಯಾದಿ, ಪಂಚನಾಮೆ ಮತ್ತು ಮುದ್ದೆಮಾಲುಗಳನ್ನು ಹಾಗೂ ಆರೋಪಿಯನ್ನು ನನ್ನ ಮುಂದೆ ಹಾಜರ ಪಡಿಸಿರುತ್ತಾರೆ. ಅದರ ಮೇರೆಗೆ ನಾನು ಠಾಣಾ ಮೊಕದ್ದಮೆ ಸಂಖ್ಯ 46/2013 ನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿ ದಾಖಲಿಸಿಕೊಂಡೆನು. ಮುದ್ದೆಮಾಲು ಮತ್ತು ಆರೋಪಿಯನ್ನು ಮುಂದಿನ ಕ್ರಮಕ್ಕಾಗಿ ತಾಬಾ ಇಟ್ಟುಕೊಂಡೆನು. ಸಂಜೆ 5-15 ರ ವೇಳೆಗೆ ಮೂಲ ಪ್ರಥಮ ವರ್ತಮಾನ ವರದಿ ಮತ್ತು ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಿಬ್ಬಂದಿ ಮುಖೇನ ನ್ಯಾಯಾಂಗ ಬಂಧನ ಕೋರಿ ಹಾಜರ ಪಡಿಸಿದೆನು. ಮುಂದಿನ ತನಿಖೆಗಾಗಿ ಚಾಸಾ-12 ಅವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ.

ನಾನು ದಾಖಲ ಮಾಡಿಕೊಂಡ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದೇನೆ . ಅದನ್ನು ನಿ.ಪಿ-3 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಚಾಸಾ-1 ಇವರು ನನಗೆ ನೀಡಿದ ಫಿರ್ಯಾದಿಯನ್ನು ನೋಡುತ್ತಿದ್ದೇನೆ . ಅದನ್ನು ನಿ.ಪಿ-4 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ -**

ಚಾಸಾ-1 ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ . ಚಾಸಾ-1 ಇವರು ನೀಡಿದ ನಿರ್ದೇಶನದ ಮೇರೆಗೆ ನಾನು ಕೆಲಸ ಮಾಡಿರುತ್ತೇನೆ ಎಂದರೆ ಸರಿ . ಗಣಕ ಯಂತ್ರದಲ್ಲಿ ಪಿಸಿ-737 ಇವರು ಫಿರ್ಯಾದಿಯನ್ನು ತಯಾರು ಮಾಡಿರುತ್ತಾರೆ. ನಿ.ಪಿ-4 ರಲ್ಲಿ ಪಿಸಿ-737 ಇವರು ದಸ್ತೂರು ಹಾಕಿಲ್ಲ. ಫಿರ್ಯಾದಿ ಬರೆಯುವವರು ದಸ್ತೂರು ಎಂದು ಸಹಿ ಮಾಡಬೇಕು ಎಂದರೆ ಗೊತ್ತಿಲ್ಲ. ಚಾಸಾ-1 ಇವರು ಫಿರ್ಯಾದಿ ನೀಡುವ ಮುಂಚೆ ಬಸ್ಸಾಪೂರದಲ್ಲಿ ಕಾನೂನು ಬಾಹಿರ ಕೃತ್ಯ ನಡೆಯುತ್ತಿದೆ ಎಂಬ ಮಾಹಿತಿ ನನಗೆ ವೈಯಕ್ತಿಕವಾಗಿ ಬಂದಿರಲಿಲ್ಲ.

ಅಂದು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ನನಗೆ ಫಿರ್ಯಾದಿ ನೀಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಇವರು ಮುದ್ದೆಮಾಲು , ಪಂಚನಾಮೆ ಮತ್ತು ಆರೋಪಿಯನ್ನು ನನ್ನ ಮುಂದೆ ಹಾಜರು ಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಸಂಖ್ಯೆಗೋಸ್ಕರ ಚಾಸಾ-1 ಇವರು ಮಾತು ಕೇಳಿ ಸುಳ್ಳು ಫಿರ್ಯಾದಿಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**